**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ, ಶಿರಾ**

**ಸಿ.ಸಿ.ನಂಃ413/2017**

**ಪಿರ್ಯಾದಿ** ಃ ರಾಜ್ಯದ ಪರವಾಗಿ ಶಿರಾ ಪೊಲೀಸ್

**ವಿರುದ್ಧ**

**ಆರೋಪಿಗಳು** ಃ
1. ಪರಶುರಾಮಯ್ಯ ಬಿನ್ ಲೇ. ಹೊಸೂರಪ್ಪ,
   62 ವರ್ಷ, ವಾಸಃ ಕಾಳಿದಾಸ ನಗರ, ಶಿರಾ ಟೌನ್.
2. ರಂಗಮ್ಮ ಕೋಂ ಲೇ. ಹೊಸೂರಪ್ಪ,
   83 ವರ್ಷ, ವಾಸಃ ಕಾಳಿದಾಸ ನಗರ, ಶಿರಾ ಟೌನ್.
3. ಲಕ್ಷ್ಮಮ್ಮ ಕೋಂ ಶ್ರೀರಾಮಯ್ಯ,
   62 ವರ್ಷ, ಮೇಲುಕುಂಟೆ ಗ್ರಾಮ, ಶಿರಾ ತಾಲ್ಲೂಕು.

## ದೋಷಾರೋಪಣೆ

ಮಹೇಶ್ ಎಸ್. ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಶಿರಾ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಆರೋಪಿ ಸಂಖ್ಯೆ 1 ಮತ್ತು 2 ಆದ ನೀವು ಶಿರಾ ತಾಲ್ಲೂಕು ಮೇಲುಕುಂಟೆ ಗ್ರಾಮದ ಸಮೀಪ ಮೇಲುಕುಂಟೆ ಸರ್ವೆ ನಂಬರ್ 12 ರಲ್ಲಿನ 28 ಗುಂಟೆ ಜಮೀನನ್ನು 1983 ನೇ ಸಾಲಿನಲ್ಲಿ ಸಾಕ್ಷಿ 1 ರವರಿಗೆ ರೂ. 5,000/- ಗಳಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತೀರಿ. ಅಂದಿನಿಂದ ಸಾಕ್ಷಿ 1 ರವರ ಹೆಸರಿಗೆ ಎಲ್ಲಾ ರೆವಿನ್ಯೂ ದಾಖಲಾತಿಗಳು ಬದಲಾವಣೆಯಾಗಿರುತ್ತವೆ ಸದರಿ 1 ಮತ್ತು 2 ನೇ ಆರೋಪಿಗಳಾದ ನೀವುಗಳು ದಿನಾಂಕ 06.05.1992 ರಂದು ಮೇಲುಕುಂಟೆ ಸರ್ವೆ ನಂಬರ್ 12 ರಲ್ಲಿನ 28 ಗುಂಟೆ ಜಮೀನನ್ನು ಆರೋಪಿ 3 ರವರ ಹೆಸರಿಗೆ ಫೋರ್ಜರಿ ಕ್ರಯ ಪತ್ರವನ್ನು ತಯಾರು ಮಾಡಿಸಿ ಶಿರಾ ಠಾಣಾ ವ್ಯಾಪ್ತಿಗೆ ಸೇರಿದ ಶಿರಾ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಸದರಿ ಫೋರ್ಜರಿ ಕ್ರಯ ಪತ್ರವನ್ನು ನೊಂದಣಿ ಮಾಡಿಸಿ 1999-2000 ನೇ ಸಾಲಿನಿದ ರೆವಿನ್ಯೂ ದಾಖಲಾತಿಗಳಲ್ಲಿ 3 ನೇ ಆರೋಪಿತಳ ಹೆಸರನ್ನು ಸೇರಿಸಿ ಸಾಕ್ಷಿ 1 ರವರಿಗೆ ಮೋಸ ಮಾಡುವ

ಸಮಾನ ಉದ್ದೇಶದಿಂದ ಕೃತ್ಯ ಎಸಗಿ ವಂಚಿಸಿದ್ದು ಆ ಮೂಲಕ ಭಾ.ದಂ.ಸಂ. ಕಲಂ 420 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದಂತೆ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಮೇಲುಕುಂಟೆ ಸರ್ವೆ ನಂಬರ್ 12 ರಲ್ಲಿನ 28 ಗುಂಟೆ ಜಮೀನನ್ನು ಆರೋಪಿ ಸಂಖ್ಯೆ 3 ರವರ ಹೆಸರಿಗೆ ಫೋರ್ಜರಿ ಕ್ರಯ ಪತ್ರವನ್ನು ಚಾಸಾ.1 ರವರರಿಗೆ ನಷ್ಟ ಉಂಟು ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದು ಆ ಮೂಲಕ ಭಾ .ದಂ.ಸಂ. ಕಲಂ 465 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಈ ಮೇಲ್ಕಂಡ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವುದರಿಂದ ನಿಮ್ಮ ವಿಚಾರಣೆ ಇದೇ ನ್ಯಾಯಾಲಯದಲ್ಲಿ ನಡೆಯುವಂತೆ ನಿರ್ದೇಶಿಸಲಾಗಿದೆ.

ಸಹಿ/-

ದಿನಾಂಕಃ 15.11.2021.

(ಮಹೇಶ್.ಎಸ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ., ಶಿರಾ.